RNU AIR DHARWAD

NOVEMBER 10, 2026

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

ಇಂದು ದೀಪಾವಳಿ, ಬಲಿ ಪಾಡ್ಯಮಿ: ಸಂಭ್ರಮ–ಸಡಗರದಿಂದ, ಹಬ್ಬದಾಚರಣೆ.

ಕಲಬುರಗಿ ಜಿಲ್ಲೆ, ಕಪನೂರು ಗ್ರಾಮದಲ್ಲಿ, ಆಧುನಿಕ ವಚನ ಮಂಟಪ: ಬೆಂಗಳೂರಿನಲ್ಲಿ, ಪೂರ್ವ ಸಿದ್ಧತಾ ಸಭೆ.

ನಶೆ ಮುಕ್ತ ಭಾರತ ಹಾಗೂ ಕರ್ನಾಟಕ: ನಾಲ್ಕನೇ ಆವೃತ್ತಿಯ, ತಂಬಾಕು ಮುಕ್ತ ಯುವ ಅಭಿಯಾನ – ರಾಯಚೂರಿನಲ್ಲಿ ಯುವಜನ ಜಾಗೃತಿ ನಡಿಗೆ.

ಕ್ಯಾನ್ಸರ್ ಖಾಯಿಲೆಯ ಚಿಕಿತ್ಸೆಗಾಗಿ ಬಳಸುವ, ಸಾವಿರದ 3 ನೂರಾ 64 ಜೀವರಕ್ಷಕ ಔ ‘ಧಿಗಳ, ಪರಿಷ್ಕೃತ ಗರಿಷ್ಠ ಚಿಲ್ಲರೆ ದರ, ಪ್ರಕಟ.

ಜಶ್ನೆ–ಎ–ಉರ್ದು: ವಾರ್ಷಿಕ ಪ್ರಶಸ್ತಿ, ವಿದ್ವಾಂಸರಿಗೆ ಪ್ರದಾನ.

<><><>

ಐದು ದಿನಗಳ, ದೀಪಗಳ ಹಬ್ಬ, ದೀಪಾವಳಿಯ ಕೊನೆಯ ದಿನವಾದ ಇಂದು, ನಾಡಿನಾದ್ಯಂತ ಬಲಿ ಪಾಡ್ಯಮಿ ಪೂಜೆಯನ್ನು, ಸಂಭ್ರಮ–ಸಡಗರ ಹಾಗೂ ಸಾಂಪ್ರದಾಯಿಕ ಶ್ರದ್ಧೆ–ಭಕ್ತಿಯಿಂದ, ಆಚರಿಸಲಾಗುತ್ತಿದೆ. ಕಾರ್ತಿಕ ಮಾಸದ ಆರಂಭದ ಹಿನ್ನೆಲೆ, ಸಂಪತ್ತು, ಸಮೃದ್ಧಿ ಮತ್ತು ಸುಖ, ಶಾಂತಿಗಾಗಿ, ಲಕ್ಷ್ಮೀ, ಸರಸ್ವತಿ ಹಾಗೂ ಗಣಪತಿಯನ್ನು ಆರಾಧಿಸಲಾಗುತ್ತಿದೆ. ಅಂಗಡಿ–ಮುಂಗಟ್ಟುಗಳು ಸುಂದರವಾಗಿ ಅಲಂಕೃತಗೊಂಡಿದ್ದು, ಹೊಸ ವರ್ಷದ ಆರಂಭದ ಹಿನ್ನೆಲೆ, ವ್ಯಾಪಾರಸ್ಥರು, ತಮ್ಮ ನೂತನ ಲೆಕ್ಕದ ಖಾತೆ–ಕಿರ್ದಿ ಪುಸ್ತಕಗಳನ್ನು ಪೂಜೆಗೆ ಅಣಿಗೊಳಿಸಿದ್ದಾರೆ. ಬಲಿಪಾಡ್ಯಮಿ ಆಚರಣೆ ಹಿನ್ನೆಲೆ, ಇಂದು ಗೋ ಪೂಜೆ ನಡೆಯಲಿದೆ. ಈ ಪದ್ಧತಿಗೆ, ಗೋವರ್ಧನ ಪೂಜೆ ಎಂದೂ ಕರೆಯಲಾಗುತ್ತದೆ. ಜನರು ಗೋವುಗಳಿಗೆ ಪೂಜೆ ಸಲ್ಲಿಸುವುದರ ಜೊತೆಗೆ, ಶ್ರೀಕೃ ಷ್ಣನನ್ನು ಆರಾಧಿಸುತ್ತಾರೆ. ಬಲಿ ಚಕ್ರವರ್ತಿ ಭೂಮಿಗೆ ಆಗಮಿಸುತ್ತಾನೆ ಎಂಬ ನಂಬಿಕೆಯಿದೆ. ಮುಖ್ಯಮಂತ್ರಿ ಡಿ.ಕೆ ಶಿವಕುಮಾರ, ಬೆಂಗಳೂರಿನ ಲೋಕ ಭವನದಲ್ಲಿ, ರಾಜ್ಯಪಾಲರಾದ ಡಾಕ್ಟರ್ ಸುಧಾ ಯಾದವ ಅವರನ್ನು ಭೇಟಿ ಮಾಡಿ, ದೀಪಾವಳಿ ಹಬ್ಬದ ಶುಭಾಶಯ ಕೋರಿದರು.

<><><>

ವಿಧಾನಸಭೆ ವಿಪಕ್ಷ ನಾಯಕ, ಆರ್.ಅಶೋಕ ಹಾಗೂ ವಿಧಾನ ಪರಿಷತ್ ವಿಪಕ್ಷ ನಾಯಕ, ಛಲವಾದಿ ನಾರಾಯಣಸ್ವಾಮಿ, ರಾಜ್ಯಪಾಲರಾದ ಡಾಕ್ಟರ್ ಸುಧಾ ಯಾದವ ಅವರನ್ನು, ಬೆಂಗಳೂರಿನ ಲೋಕಭವನದಲ್ಲಿ, ಭೇಟಿ ಮಾಡಿ, ಸಮಾಲೋಚಿಸಿದರು. ದೀಪಾವಳಿ ಹಬ್ಬದ ಶುಭಾಶಯ ಕೋರಿದರು.

<><><>

ಕಲಬುರಗಿ ಬಳಿಯ, ಕಪನೂರು ಗ್ರಾಮದಲ್ಲಿ, ಆಧುನಿಕ ವಚನ ಮಂಟಪ ಜಿಲ್ಲಾ ಉಸ್ತುವಾರಿ ಸಚಿವ, ಪ್ರಿಯಾಂಕ ಖರ್ಗೆ, ಬೆಂಗಳೂರಿನ ತಮ್ಮ ಕಚೇರಿಯಲ್ಲಿ, ಅಧಿಕಾರಿಗಳೊಂದಿಗೆ, ವಿಸ್ತೃತ ಯೋಜನಾ ವರದಿ ಸಿದ್ಧ ಪಡಿಸಲು, ಪೂರ್ವ ಸಿದ್ಧತಾ ಸಭೆ ನಡೆಸಿದರು. ಶರಣರ ವಚನ ಪರಂಪರೆ, ಸಾಮಾಜಿಕ ಕ್ರಾಂತಿ ಹಾಗೂ ಕನ್ನಡದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಪ್ರತಿಬಿಂಬಿಸುವ, ಹೆಸರಾಂತ ವಾಸ್ತುಶಿಲ್ಪಿಗಳು ಸಿದ್ಧಪಡಿಸಿ ಸಲ್ಲಿಸಿರುವ ವಿನ್ಯಾಸ ಹಾಗೂ ಪರಿಕಲ್ಪನಾ ವರದಿಗಳನ್ನು ಸಚಿವರು ವೀಕ್ಷಿಸಿದರು. ವಚನ ಮಂಟಪದ ಜೊತೆಗೆ ಶರಣರ ಜೀವನ, ವಚನ ಸಾಹಿತ್ಯ ಮತ್ತು ವಚನ ಚಳವಳಿಯ ಇತಿಹಾಸವನ್ನು ಪರಿಚಯಿಸುವ ವಸ್ತುಸಂಗ್ರಹಾಲಯ, ವ್ಯಾಖ್ಯಾನ ಕೇಂದ್ರ, ಅನುಭವ ಕೇಂದ್ರ ಹಾಗೂ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವ ಪರಿಕಲ್ಪನೆಯೂ ಯೋಜನೆಯಲ್ಲಿದೆ, ಎಂದು ಸಚಿವರು ಮಾಹಿತಿ ನೀಡಿದರು. ಕಲಬುರಗಿ ಜಿಲ್ಲೆಯ, ಐತಿಹಾಸಿಕ ಕಾಳಗಿ ತಾಲೂಕಿನ, ಸೂರ್ಯನಾರಾಯಣ ದೇವಾಲಯದ ಸಂರಕ್ಷಣಾ ಕಾಮಗಾರಿ, ಸೇಡಂ ತಾಲೂಕಿನ ಐತಿಹಾಸಿಕ ಮಳಖೇಡ ಕೋಟೆಯ ಅಭಿವೃದ್ಧಿ, ಚಿತ್ತಾಪುರ ತಾಲೂಕಿನ ನಾಗಾವಿ ಪಾರಂಪರಿಕ ಪ್ರದೇಶದಲ್ಲಿರುವ, ಪ್ರಾಚ್ಯ ಕುರುಹುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿ ಕಾಮಗಾರಿಗಳ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಚಿತ್ತಾಪುರ ತಾಲೂಕಿನ ಕನಗನಹಳ್ಳಿಯ, ಐತಿಹಾಸಿಕ ಬೌದ್ಧ ನೆಲೆ ಹಾಗೂ ಪ್ರಾಚ್ಯ ಕುರುಹುಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೂ ಅಗತ್ಯ ಕ್ರಮ ಕೈಗೊಳ್ಳುವ ಕುರಿತು ಸಚಿವರು, ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

<><><>

ಕಲ್ಯಾಣ ಕರ್ನಾಟಕದ, ಪ್ರಸಿದ್ಧ ಧಾರ್ಮಿಕ ಕ್ಷೇತ್ರ, ಗಾಣಗಾಪುರದ ಶ್ರೀ ದತ್ತಾತ್ರೇಯ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ, 250 ಕೋಟಿ ರೂಪಾಯಿ ವೆಚ್ಚದ, ಯೋಜನೆ ಸಿದ್ಧಗೊಂಡಿದೆ ಎಂದು, ಗೃಹ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಸಚಿವರು ಈ ವಿಷಯ ತಿಳಿಸಿ, ಮೊದಲ ಹಂತದಲ್ಲಿ 50 ಕೋಟಿ ರೂಪಾಯಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ ಎಂದಿದ್ದಾರೆ. ಸಂಗಮ ಘಾಟ್ ಅಭಿವೃದ್ಧಿ, ಪಾಪವಿನಾಶ ತೀರ್ಥ ಅಭಿವೃದ್ಧಿ, ದೇವಸ್ಥಾನದ ಸಂಪರ್ಕ ಕಲ್ಪಿಸುವ ಪಾದಚಾರಿ ಮಾರ್ಗ, ವಾಹನ ನಿಲುಗಡೆ ಸೇರಿದಂತೆ ದೇವಸ್ಥಾನ ಸಂಕೀರ್ಣದ ಅಭಿವೃದ್ಧಿ ಕಾಮಗಾರಿಗಳನ್ನು, ಈ ಮಾಸ್ಟರ್ ಪ್ಲ್ಯಾನ್ ಒಳಗೊಂಡಿದೆ.

<><><>

ನಶೆ ಮುಕ್ತ ಭಾರತ ಹಾಗೂ ಕರ್ನಾಟಕ, ಆಪರೇಷನ್ ರೈಸ್ ಹಾಗೂ ಬೇಡ ಬ್ರೋ ಅಭಿಯಾನಗಳ ಹಿನ್ನೆಲೆ, ನಶೆ ಮುಕ್ತ ರಾಯಚೂರು ಹಾಗೂ ನಾಳ್ಕನೇ ಆವೃತ್ತಿಯ, ತಂಬಾಕು ಮುಕ್ತ ಯುವ ಅಭಿಯಾನದಡಿ, ಯುವಜನ ಜಾಗೃತಿ ನಡಿಗೆ ಹಾಗೂ ಬೀದಿ ನಾಟಕ ಪ್ರದರ್ಶನಕ್ಕೆ, ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹೊಪಾತ್ರ, ಚಾಲನೆ ನೀಡಿದರು. ರಾಯಚೂರು ನಗರದ, ಶೆಟ್ಟಿ ಬಾವಿ ಚೌಕ್ ದಿಂದ, ಹರಿಜನವಾಡದ ನಾಗರಕಟ್ಟೆ ದೇವಸ್ಥಾನದ ವರೆಗೆ, ಜಾಥಾ ಜರುಗಿತು. ಸಮಾರೋಪದಲ್ಲಿ ಮಾತನಾಡಿದ ಅವರು, ಮಾದಕ ವಸ್ತು, ಮದ್ಯ, ತಂಬಾಕು ಮತ್ತು ತಂಬಾಕು ಉತ್ಪನ್ನಗಳು, ದೈಹಿಕ ಸುದೃಢತೆ, ಕ್ಷಮತೆ, ಮಾನಸಿಕ ನೆಮ್ಮದಿ, ವಯಕ್ತಿಕ ಜೀವನ ಹಾಗೂ ಕುಟುಂಬದ ಸ್ವಾಸ್ಥ್ಯ ನಾಶ ಪಡಿಸುತ್ತವೆ. ಯುವಜನರು ಇವುಗಳ ಬಳಕೆ ಮತ್ತು ಸಾಗಣೆ ವಿರುದ್ಧ ಜಾಗ್ರತರಾಗಬೇಕು, ಎಂದರು.

<><><>

ಕ್ಯಾನ್ಸರ್ ಖಾಯಿಲೆಯಿಂದ ಬಳಲುತ್ತಿರುವವರಿಗೆ, ಜೀವರಕ್ಷಕ ಚಿಕಿತ್ಸೆಗಾಗಿ ಬಳಸುವ, 1 ಸಾವಿರದ 3 ನೂರಾ 64 ಔ 'ಧಿಗಳ, ಪರಿಷ್ಕೃತ ಗರಿಷ್ಠ ಚಿಲ್ಲರೆ ದರಗಳನ್ನು, ಪ್ರಕಟಿಸಲಾಗಿದೆ. ಹೊಸ ದರಗಳು ನಿನ್ನೆಯಿಂದ ಜಾರಿಗೆ ಬಂದಿವೆ. ರಾಷ್ಟ್ರೀಯ ಔ 'ಧ ಬೆಲೆ ನಿಗಾ ಪ್ರಾಧಿಕಾರ, 137 ಕ್ಯಾನ್ಸರ್ ಔ 'ಧಗಳ ಗರಿ ೃ ಚಿಲ್ಲರೆ ದರದ ಮೇಲೆ ವ್ಯಾಪಾರ ಲಾಭದ ಮಿತಿಯನ್ನು ನಿಗದಿಪಡಿಸಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯ, ಹೆಚ್ಚಿನ ದರ ವಸೂಲಿ ಅಥವಾ ಔ 'ಧ ಬೆಲೆಗೆ ಸಂಬಂಧಿಸಿದ ಇತರ ದೂರುಗಳಿದ್ದಲ್ಲಿ ಗ್ರಾಹಕರು 'ಫಾರ್ಮಾ ಜನ ಸಮಾಧಾನ್' ಜಾಲತಾಣದ ಮೂಲಕ ದೂರು ದಾಖಲಿಸಬಹುದು, ಎಂದು ತಿಳಿಸಿದೆ.

<><><>

ಪೆಟ್ರೋಲ್‌ನಲ್ಲಿ ಶೇಕಡ 26 ರಿಂದ 31 ರ ೃ ಎಥನಾಲ್ ಇದೆ ಎಂದು, ಕರ್ನಾಟಕದ ಆಹಾರ ಹಾಗೂ ನಾಗರಿಕ ಪೂರೈಕೆ ಖಾತೆ ಸಚಿವ, ರಿಜ್ವಾನ್ ಅ 'ದ್, ಯಾವುದೇ ಆಧಾರವಿಲ್ಲದ ಹೇಳಿಕೆ ನೀಡಿ ಆತಂಕ ಸೃಷ್ಟಿಸುವ ಬದಲು, ಅಧಿಕೃತ ತಪಾಸಣಾ ವರದಿಗಳನ್ನು ಪರಿಶೀಲಿಸಬೇಕಿತ್ತು ಎಂದು, ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆ ಸಚಿವ, ಪ್ರಲ್ಹಾದ ಜೋಶಿ ಹೇಳಿದ್ದಾರೆ. ಎಕ್ಸ್ ಖಾತೆಯಲ್ಲಿ, ಕೇಂದ್ರ ಸಚಿವರು ಅಂಕಿ-ಸಂಖ್ಯೆಗಳ ಸಮೇತ ಸುದೀರ್ಘ ಸ್ಪಷ್ಟನೆ ನೀಡಿದ್ದು, 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪರೀಕ್ಷಿಸಲಾದ, ಎಲ್ಲಾ 893 ಮಾದರಿಗಳು, ನಿಗದಿತ ಎಥನಾಲ್ ಮಿಶ್ರಣದ, ಶೇಕಡ 19 ರಿಂದ 21 ರ ಮಿತಿಗೆ ಒಳಪಟ್ಟಿವೆ. ಅತ್ಯಂತ ಮುಖ್ಯವಾಗಿ, ತೈಲ ಮಾರಾಟ ಸಂಸ್ಥೆಗಳು, ಕರ್ನಾಟಕದಲ್ಲಿ ಪರೀಕ್ಷಿಸಿದ ಎಲ್ಲ 56 ಮಾದರಿಗಳು, ಸರಾಸರಿ ಶೇಕಡ 19 ದಶಾಂಶ 3-0 ಯಷ್ಟು, ಅಂದರೆ, ಶೇಕಡ 19 ರಿಂದ 20 ರ ವ್ಯಾಪ್ತಿಯಲ್ಲಿ, ನಿಯಮಾವಳಿಗೆ ಬದ್ಧವಾಗಿವೆ ಎಂದು, ಸಚಿವ ಜೋಶಿ ತಿಳಿಸಿದ್ದಾರೆ.

<><><>

ಪೆಟ್ರೋಲಿಯಂ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲು, ರಾಜ್ಯ ಸರ್ಕಾರಗಳಿಗೆ ಅಧಿಕಾರವಿದ್ದು, ನಿಯಮ ಉಲ್ಲಂಘಿಸಿದ್ದು ಖಾತ್ರಿಯಾದರೆ, ಸೂಕ್ತ ಕಾನೂನು ಕ್ರಮ ಜರುಗಿಸಬಹುದು ಎಂದು, ಉಡುಪಿ ಚಿಕ್ಕಮಗಳೂರು, ಲೋಕಸಭಾ ಕ್ಷೇತ್ರದ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಸ್ಪಷ್ಟ ಪಡಿಸಿದ್ದಾರೆ. ಫೇಸ್‌ಬುಕ್ ನಲ್ಲಿ ಮಾಹಿತಿ ನೀಡಿರುವ ಅವರು, ಪೆಟ್ರೋಲ್‌ನಲ್ಲಿ ಶೇಕಡ 20 ರ ೃ ಎಥೆನಾಲ್ ಮಿಶ್ರಣ ಮಾಡುವುದು, ಕೇಂದ್ರ ಸರ್ಕಾರದ ನಿರ್ಧಾರ. ಅದಕ್ಕಿಂತ ಹೆಚ್ಚು ಮಿಶ್ರಣ ಮಾಡಲಾಗಿದೆ ಎಂದು, ರಾಜ್ಯ ಕಾಂಗ್ರೆಸ್ ನಾಯಕರು ದೂರಿದ್ದಾರೆ. ತಪ್ಪಿತಸ್ಥರ ವಿರುದ್ಧ ತನಿಖೆಯಾಗಲಿ, ಎಂದು ಆಗ್ರಹಿಸಿದ್ದಾರೆ.

<><><>

ಭಾ ೆ ಎಂಬುದು, ಆ ನೆಲದ ಪರಂಪರೆ, ಸಂಸ್ಕೃತಿ, ಜೀವನ ಶೈಲಿ ಮತ್ತು ಮೌಲ್ಯಗಳನ್ನು ಒಳಗೊಂಡ, ಸಮಗ್ರ ಸಂಪತ್ತು ಎಂದು, ಅಲ್ಪಸಂಖ್ಯಾತರ ಅಭಿವೃದ್ಧಿ ಖಾತೆ ಸಚಿವ ಯು.ಟಿ.ಖಾದರ ಹೇಳಿದ್ದಾರೆ. ರಾಜ್ಯ ಉರ್ದು ಅಕಾಡೆಮಿ ಬೆಂಗಳೂರಿನಲ್ಲಿ ಆಯೋಜಿಸಿದ್ದ, ವಾರ್ಷಿಕ ಪ್ರಶಸ್ತಿ ಪ್ರದಾನ, ಹಾಗೂ ಜಶ್ನ್-ಎ-ಉರ್ದು ಸಮಾರಂಭದಲ್ಲಿ ಪಾಲ್ಗೊಂಡು, ಅವರು, ಮಾತನಾಡಿದರು. ಉರ್ದು ಭಾ ೆಯ ಪರಂಪರೆ, ಇತಿಹಾಸ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶವನ್ನು ಕಾರ್ಯಕ್ರಮ ಹೊಂದಿದೆ ಎಂದರು.

<><><>

ಚಿಕ್ಕಬಳ್ಳಾಪುರ ಜಿಲ್ಲೆ, ಚಿಂತಾಮಣಿ ತಾಲೂಕು, ಚೊಕ್ಕರೆಡ್ಡಿಹಳ್ಳಿ ಬಳಿ, ಖಾಸಗಿ ವಾಹನದ ಟಾಯರ್ ಸ್ಫೋಟಗೊಂಡ ಪರಿಣಾಮ, ಸರಣಿ ಅಪಘಾತ ಸಂಭವಿಸಿ, ದಂಪತಿ ಸೇರಿದಂತೆ, ಮೂವರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ, ನಿನ್ನೆ ರಾತ್ರಿ ನಡೆದಿದೆ. ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ, ಬ್ರಾಹ್ಮಣರಹಳ್ಳಿ ಗ್ರಾಮದ ಶ್ರೀನಿವಾಸ ಹಾಗೂ ನರಸಮ್ಮ ದಂಪತಿ, ಆಟೋದಲ್ಲಿ ಪ್ರಯಾಣಿಸುತ್ತಿದ್ದ ಚಿಂತಾಮಣಿಯ ಜೆ.ಜೆ ಕಾಲನಿಯ ಆಂಜಿನಮ್ಮ ಮೃತಪಟ್ಟಿದ್ದಾರೆ. ಗಾಯಗೊಂಡವರನ್ನು ಚಿಂತಾಮಣಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಲಾಗಿದೆ.

<><><>

ಬೆಂಗಳೂರು ನಾಗರಬಾವಿಯ, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಗು, ವೈದ್ಯರ ನಿರ್ಲಕ್ಷ್ಯದಿಂದ, ಕೋಮಾ ಸ್ಥಿತಿಗೆ ತಲುಪಿದೆ ಎಂಬ ಆರೋಪಗಳ ಹಿನ್ನೆಲೆ, ಕೇಂದ್ರ ಬೃಹತ್ ಕೈಗಾರಿಕೆಗಳ ಖಾತೆ ಸಚಿವ, ಎಚ್.ಡಿ. ಕುಮಾರಸ್ವಾಮಿ, ಆಸ್ಪತ್ರೆಗೆ ಭೇಟಿ ನೀಡಿ, ಮಗುವಿನ ಕುಶಲ ವಿಚಾರಿಸಿದರು. ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಗುವನ್ನು ವೀಕ್ಷಿಸಿದ ಕೇಂದ್ರ ಸಚಿವರು, ಪೋ 'ಕರೊಂದಿಗೆ ಚರ್ಚಿಸಿದರು. ತುರ್ತುನಿಗಾ ಘಟಕದಲ್ಲಿ ಚಿಕಿತ್ಸೆ ನೀಡುತ್ತಿರುವ, ಡಾಕ್ಟರ್ ಸಂಜಯ ಸ್ವಾಮಿ, ಮಗುವಿನ ಜೀವಕ್ಕೆ ಅಪಾಯವಿಲ್ಲ. ಗುಣಮುಖವಾಗಲು ಸ್ವಲ್ಪ ಕಾಲಾವಕಾಶದ ಅಗತ್ಯವಿದೆ ಎಂದು ತಿಳಿಸಿದ್ದಾಗಿ, ಸಚಿವರು ಮಾಹಿತಿ ನೀಡಿದರು.

<><><>

ಸಂಕ್ಷಿಪ್ತ ಸುದ್ದಿಗಳು:

ದಾವಣಗೆರೆ ಜಿಲ್ಲೆ, ಜಗಳೂರು ತಾಲೂಕಿನ, 57 ಕೆರೆಗಳಿಗೆ ತುಂಗಭದ್ರಾ ನದಿ ನೀರು ಹರಿದುಬರುತ್ತಿದ್ದು, ರೈತರಲ್ಲಿ ಸಂತಸ ಮನೆಮಾಡಿದೆ. ರೈತರು ಹಾಗೂ ಗ್ರಾಮಸ್ಥರು ಸಂಭ್ರಮದಿಂದ ಕೆರೆಗಳಿಗೆ ಪೂಜೆ ಸಲ್ಲಿಸಿ, ಭಗೀರಥೋತ್ಸವ ಆಚರಿಸಿದರು.

ಗದಗ ತಾಲೂಕು, ಹಿರೇಹಂದಿಗೋಳ ಗ್ರಾಮದ, ಸರ್ಕಾರಿ ಪ್ರೌಢ ಶಾಲೆಯಲ್ಲಿ, ಕು ೃ ರೋಗದ ಬಗ್ಗೆ, ಮಕ್ಕಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಜರುಗಿತು. ರೋಗವನ್ನು ದ್ವೇಷಿಸೋಣ; ರೋಗಿಯನ್ನಲ್ಲ ಎಂಬ, ಮಹತ್ವದ ಸಂದೇಶ ಸಾರಲಾಯಿತು.

ರಾಷ್ಟ್ರೀಯ ದತ್ತು ಮಾಸಾಚರಣೆ ಅರಿವು ಕಾರ್ಯಕ್ರಮಕ್ಕೆ, ಚಾಮರಾಜನಗರ ಜಿಲ್ಲೆ, ಕೊಳ್ಳೇಗಾಲದಲ್ಲಿ, ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಸಿ.ಎನ್. ನೀಲಾದೇವಿ, ಚಾಲನೆ ನೀಡಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಇಂದು ದೀಪಾವಳಿ, ಬಲಿ ಪಾಡ್ಯಮಿ: ಸಂಭ್ರಮ-ಸಡಗರದಿಂದ, ಹಬ್ಬದಾಚರಣೆ.

ಕಲಬುರಗಿ ಜಿಲ್ಲೆ, ಕಪನೂರು ಗ್ರಾಮದಲ್ಲಿ, ಆಧುನಿಕ ಮಚನ ಮಂಟಪ: ಬೆಂಗಳೂರಿನಲ್ಲಿ, ಪೂರ್ವ ಸಿದ್ಧತಾ ಸಭೆ.

ನಶೆ ಮುಕ್ತ ಭಾರತ ಹಾಗೂ ಕರ್ನಾಟಕ: ನಾಳ್ಕನೇ ಆವೃತ್ತಿಯ, ತಂಬಾಕು ಮುಕ್ತ ಯುವ ಅಭಿಯಾನ – ರಾಯಚೂರಿನಲ್ಲಿ ಯುವಜನ ಜಾಗೃತಿ ನಡಿಗೆ.

ಕ್ಯಾನ್ಸರ್ ಖಾಯಿಲೆಯ ಚಿಕಿತ್ಸೆಗಾಗಿ ಬಳಸುವ, ಸಾವಿರದ 3 ನೂರಾ 64 ಜೀವರಕ್ಷಕ ಔ ‘ಧಿಗಳ, ಪರಿಷ್ಕೃತ ಗರಿಷ್ಟ ಚಿಲ್ಲರೆ ದರ, ಪ್ರಕಟ.

ಜಶ್ನೆ–ಎ–ಉರ್ದು: ವಾರ್ಷಿಕ ಪ್ರಶಸ್ತಿ, ವಿದ್ವಾಂಸರಿಗೆ ಪ್ರದಾನ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>